# ಎಸ್.ಎಸ್.ಎಲ್.ಸಿ. ಪರೀಕ್ಷೆ ಮಾರ್ಚ್ 2010

## ವಿವಿಧ ರೀತಿಯ ಪ್ರಶ್ನೆಗಳಿಗೆ ಉದಾಹರಣೆಗಳು

ವಿಷಯ: ಸಮಾಜ ವಿಜ್ಞಾನ

ಸಮಯ ಬೆಳಿಗ್ಗೆ: 10.30 ರಿಂದ 1.30ರ ವರೆಗೆ

ಸಂಕೇತ ಸಂಖ್ಯೆ : 85-ಕೆ ಗರಿಷ್ಠ ಅಂಕಗಳು: 100

1) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು ಯಾವುದೇ ವಿಭಾಗಗಳನ್ನು ಹೊಂದಿರುವುದಿಲ್ಲ.
2) ಈ ಪ್ರಶ್ನೆ ಸಹಿತ ಉತ್ತರ ಪತ್ರಿಕೆಯು ಬಹು ಆಯ್ಕೆ ಪ್ರಶ್ನೆಗಳ ಉಪಪ್ರಶ್ನೆಗಳು ಸೇರಿ 60 ಪ್ರಶ್ನೆಗಳನ್ನು ಹೊಂದಿದೆ.
3) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ ಬಹು ಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.
4) ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಲು ಸಾಕಷ್ಟು ಜಾಗವನ್ನು ಕೊಡಲಾಗಿದೆ. ಆಯಾ ಜಾಗ ದಲ್ಲಿಯೇ ಬರೆಯಿರಿ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ.

### I. ಬಹು ಆಯ್ಕೆ ಪ್ರಶ್ನೆಗಳು 15x1=1

1. ಈ ಕೆಳಗಿನವುಗಳಲ್ಲಿ ರೈತವಾದಿ ಪದ್ಧತಿಯ ಲಕ್ಷಣಗಳಾವುವು?

(A) ಕಂದಾಯವನ್ನು ಭೂಮಿಯ ಫಲವತ್ತತೆ ಮತ್ತು ನೀರಾವರಿ ಸೌಲಭ್ಯದ ಆಧಾರದ ಮೇಲೆ ನಿಗದಿಸಲಾಗುತ್ತಿತ್ತು

(B) ಭೂ-ಕಂದಾಯವನ್ನು ಉತ್ಪಾದನೆಯ ಆಧಾರದ ಮೇಲೆ ನಿಗದಿಪಡಿಸುತ್ತಿದ್ದರು

(C) ಈ ಪದ್ಧತಿಯನ್ನು ಪಶ್ಚಿಮ ಮತ್ತು ಮಧ್ಯ ಭಾರತದಲ್ಲಿ ಜಾರಿಗೆ ತಂದರು

(D) ಹಿಂದೆ ಕಂದಾಯ ವಸೂಲಿ ಮಾಡುತ್ತಿದ್ದವರನ್ನು ಭೂ ಖಾಯಂ ಒಡೆಯರನ್ನಾಗಿ ಮಾಡಿರು

2. 1919ರ ಭಾರತ ಸರ್ಕಾರದ ಶಾಸನ ಇಂದಿನ ಸಂಸತ್ತನ್ನು ರೂಪಿಸುವಲ್ಲಿ ಬಹು ಮುಖ್ಯವಾಗಿದೆ ಏಕೆಂದರೆ:

(A) ಜವಾಬ್ದಾರಿಯುತ ಸರ್ಕಾರವನ್ನು ಆರಂಭಿಸಲಾಯಿತು

(B) ಸ್ಥಳೀಯ ಸರ್ಕಾರವನ್ನು ಆರಂಭಿಸಲಾಯಿತು

(C) ಕೇಂದ್ರದಲ್ಲಿ ಎರಡು ಸದನಗಳ ಶಾಸನ ಸಭೆ ರಚಿಸಿತು

(D) ಆಡಳಿತ ಇಲಾಖೆಯಲ್ಲಿ ವಿಷಯಗಳನ್ನು ಮೂರು ಪಟ್ಟಿಗಳನ್ನಾಗಿ ವಿಂಗಡಿಸಲಾಯಿತು

3. ಸುರಪುರದ ವೆಂಕಟಪ್ಪನಾಯಕನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದು ಅನುಪಮವಾದ ಸ್ಥಾನಗಳಿಸಿದ್ದಾರೆ. ಏಕೆಂದರೆ ಅವರು:

(A) ಬ್ರಿಟಿಷರ ಗುಲಾಮಗಿರಿಯನ್ನು ಒಪ್ಪಲು ನಿರಾಕರಿಸಿ ಪ್ರಾಣತ್ಯಾಗ ಮಾಡಿದನು

(B) ಕಪ್ಪ ಕಾಣಿಕೆಗಳನ್ನು ಬ್ರಿಟಿಷರಿಗೆ ಕೊಡಲಿಲ್ಲ

(C) ಚತ್ರಕ ಸೂತ್ರದಿಂದ ಬೇಸತ್ತಿದನು

(D) ಬ್ರಿಟಿಷರ ವಿರುದ್ಧ ಜಮೀನ್ದಾರರನ್ನು ಬಂಡೇಳುವಂತೆ ಮಾಡಿದನು

4. ಜುನಾಗಡ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಸೇರಲು ನಿರಾಕರಿಸಿತು ಏಕೆಂದರೆ:

(A) ನವಾಬನು ಹೊಸ ರಾಜ್ಯ ಸ್ಥಾಪಿಸಲು ಯೋಚಿಸಿದನು

(B) ಬಹುಸಂಖ್ಯಾ ಜುನಾಗಡದ ಪ್ರಜೆಗಳು ಪಾಕಿಸ್ಥಾನಕ್ಕೆ ಸೇರಲು ಇಚ್ಛಿಸಿದರು

(C) ಪಾಕಿಸ್ಥಾನವು ಜುನಾಗಡವನ್ನು ಆಕ್ರಮಿಸಿತು

(D) ನವಾಬನು ಪಾಕಿಸ್ಥಾನಕ್ಕೆ ಸೇರುವ ಇಂಗಿತ ವ್ಯಕ್ತಪಡಿಸಿನು

5. ಮೇಜಿ ಪುನರಾಗಮನದ ಪರಿಣಾಮವಾಗಿ:

(A) ಕೊಟೊಡೋರ್ ಪುರಿ ಜಪಾನ್‌ನೊಂದಿಗೆ ವ್ಯಾಪಾರ ಮಾಡುವ ಹಕ್ಕನ್ನು ಪಡೆದನು

(B) ಹಲವಾರು ಯುರೋಪಿನ ರಾಷ್ಟ್ರಗಳು ವ್ಯಾಪಾರಕ್ಕಾಗಿ ಜಪಾನ್ ಪ್ರವೇಶಿಸಿದವು

(C) ಜಪಾನ್ ಒಂದು ಶ್ರೀಮಂತ ಕೈಗಾರಿಕಾ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಿತು

(D) ಜಪಾನ್ ಒಂದು ಪ್ರತ್ಯೇಕತಾ ನೀತಿಯನ್ನು ಅನುಸರಿಸಿತು

6. ಎರಡನೇ ಮಹಾಯುದ್ಧ ನಿಲ್ಲಲು ಕಾರಣವಾದ ಘಟನೆ

(A) ಅಮೆರಿಕವು ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬ್ ದಾಳಿ ಮಾಡಿತು

(B) ಹಿಟ್ಲರ್‌ನು ಆತ್ಮಹತ್ಯೆ ಮಾಡಿಕೊಂಡನು

(C) ವಿಶ್ವಸಂಸ್ಥೆಯು ಸ್ಥಾಪನೆಯಾಯಿತು

(D) ಇಟಲಿಯು ಆಫ್ರಿಕವನ್ನು ಸೋಲಿಸಲ್ಪಟ್ಟಿತು

7. ಕಪ್ಪು ಹಲಗೆ ಯೋಜನೆಯ ಮುಖ್ಯ ಉದ್ದೇಶವೇನೆಂದರೆ

(A) ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ

(B) ವಯಸ್ಕರ ಮತ್ತು ಮಹಿಳಾ ಶಿಕ್ಷಣಕ್ಕೆ ಒತ್ತು

(C) ಮೂಲಭೂತ ಸೌಕರ್ಯ ಮತ್ತು ಶಿಕ್ಷಕರನ್ನು ಶಾಲೆಗಳಿಗೆ ಒದಗಿಸುವುದು

(D) ಮಹಿಳಾ ಮತ್ತು ಹಿಂದುಳಿದ ವರ್ಗಗಳಿಗೆ ಶಿಕ್ಷಣ ಒದಗಿಸುವುದು

8. ಸ್ತ್ರೀ-ಪುರುಷರು ಸಮಾನರು ಎಂಬ ತತ್ವ ಜಾರಿಗೆ ಬರಬೇಕಾದರೆ

(A) ಬಡತನ ನಿರ್ಮೂಲನೆ ಆಗಬೇಕು

(B) ವರದಕ್ಷಿಣೆ ಪದ್ಧತಿ ನಿರ್ಮೂಲನೆ ಆಗಬೇಕು

(C) ಸರ್ಕಾರಿ ಉದ್ಯೋಗದಲ್ಲಿ ಸ್ತ್ರೀ-ಪುರುಷರಿಗೆ ಸಮಾನ ಅವಕಾಶ ಇರಬೇಕು

(D) ಆರ್ಥಿಕ ಅಸಮಾನತೆ ನಿವಾರಣೆಯಾಗಬೇಕು

9. ಅಭಿವೃದ್ಧಿಶೀಲ ರಾಷ್ಟ್ರಗಳು ಆರ್ಥಿಕ ಸ್ವಾವಲಂಬನೆ ಸಾಧಿಸಲು ಹೋರಾಡುತ್ತಿದೆ ಏಕೆಂದರೆ

(A) ಅವುಗಳು ಎಲ್ಲಾ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಡನೆ ಸ್ಪರ್ಧಿಸಲು ಬಯಸುತ್ತದೆ

(B) ಆರ್ಥಿಕ ಸ್ವಾವಲಂಬನೆ ಹೊಂದಿದಾಗ ಮಾತ್ರ ರಾಜಕೀಯದಲ್ಲಿ ಸ್ವಾತಂತ್ರ್ಯಕ್ಕೆ ಬೆಲೆ ಎಂದು ನಂಬಿಕೆ

(C) ಅವುಗಳು ತಮ್ಮ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ಪುನರ್ರಚಿಸಲು ಬಯಸುತ್ತದೆ

(D) ಅವುಗಳು ಆರ್ಥಿಕ ಅಸಮಾನತೆಯ ಸಮಸ್ಯೆಯನ್ನು ಹೋಗಲಾಡಿಸಲು ಬಯಸುತ್ತದೆ

10. ಭಾರತದ ಕೆಲವು ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಮಳೆ ಬೀಳುತ್ತದೆ ಏಕೆಂದರೆ

(A) ಅತಿ ಹೆಚ್ಚು ಉಷ್ಣಾಂಶ ಮತ್ತು ಒಣಗಾಳಿ

(B) ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳು

(C) ವಿವಿಧ ಮೇಲ್ಮೈ ಲಕ್ಷಣ ಮತ್ತು ಮಾನ್ಸೂನ್ ಮಾರುತಗಳು

(D) ಕಡಿಮೆ ಉಷ್ಣಾಂಶ ಮತ್ತು ಹೆಚ್ಚು ಒತ್ತಡ

11. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು ಕಂಡು ಬರುವುದು ಎಲ್ಲಿ ಅಂದರೆ

(A) ಅಧಿಕ ಉಷ್ಣಾಂಶ, ಅಧಿಕ ತೇವಾಂಶ ಮತ್ತು ಕಡಿಮೆ ಮಳೆ ಬೀಳುವುದು

(B) ಕಡಿಮೆ ಉಷ್ಣಾಂಶ, ಅಧಿಕ ತೇವಾಂಶ ಮತ್ತು ಕಡಿಮೆ ಮಳೆ ಬೀಳುವುದು

(C) ಹೆಚ್ಚು ಉಷ್ಣಾಂಶ, ಹೆಚ್ಚು ತೇವಾಂಶ ಮತ್ತು ಅಧಿಕ ಮಳೆ ಬೀಳುವುದು

(D) ಕಡಿಮೆ ಉಷ್ಣಾಂಶ, ಕಡಿಮೆ ತೇವಾಂಶ ಮತ್ತು ಕಡಿಮೆ ಮಳೆ ಬೀಳುವುದು

12. ಬಾರಾಮರ್ ಶಕ್ತಿ ಸ್ಥಾವರದ ಉದ್ದೇಶ

(A) ಅಧಿಕ ಪ್ರಮಾಣದಲ್ಲಿ ಸೌರವಿದ್ಯುತ್‌ನ್ನು ಉತ್ಪಾದಿಸುವುದು

(B) ಉಬ್ಬರವಿಳಿತ ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಸಂಶೋಧನೆ ಮಾಡುವುದು

(C) ಪವನ ಶಕ್ತಿಯ ಬಗಗೆ ವಿಶೇಷ ಸಂಶೋಧನೆ ಮಾಡುವುದು

(D) ಅಧಿಕ ಪ್ರಮಾಣದಲ್ಲಿ ಭೂಶಾಖ ಶಕ್ತಿಯನ್ನು ಉತ್ಪಾದಿಸುವುದು

13. ರೈಲುಗಾಲಿ ಮತ್ತು ಅಚ್ಚುಗಳ ತಯಾರಿಕಾ ಕಾರ್ಖಾನೆ ಸ್ಥಾಪಿಸಿರುವ ಸ್ಥಳ

(A) ಯಲಹಂಕ

(B) ಚಿತ್ತರಂಜನ್

(C) ಪೆರಂಬೂರು

(D) ಕೊಚ್ಚಿ

14. ಭಾರತೀಯ ಧಾನ್ಯ ಸಂಗ್ರಹಣ ಕೇಂದ್ರವಿರುವ ಸ್ಥಳ

(A) ಹಾಪೂರ್

(B) ಮೈಸೂರು

(C) ಭೂಪಾಲ್

(D) ಸೂರತ್‌ಘರ್

15. ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮದ ಗುರಿ ಎಂದರೆ

(A) ಕಾರ್ಮಿಕರಿಗೆ ತರಬೇತಿ ನೀಡುವುದು

(B) ಕೈಗಾರಿಕಾ ಯಂತ್ರಗಳನ್ನು ವಿನ್ಯಾಸಗೊಳಿಸುವುದು

(C) ಸಣ್ಣ ಉತ್ಪಾದಕರಿಗೆ ಮಾರ್ಗದರ್ಶನ ನೀಡುವುದು

(D) ಸಣ್ಣ ಕೈಗಾರಿಕೆಗಳ ಉತ್ಪನ್ನಗಳ ಮಾರಾಟಕ್ಕೆ ನೆರವು ನೀಡುವುದು

**II. ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ** 5x1=5

16. ಬ್ರೂಸ್ಸಿಯನ್ನು ವಾಂಡಿವಾಷ್‌ನಲ್ಲಿ ಸೋಲಿಸಿದ ಇಂಗ್ಲೀಷ್‌ರ ಸೇನಾನಿ ________________

17. ಪುರಾತನ ಮೆಸಪೊಟೋಮಿಯ ಇದ್ದ ಪ್ರದೇಶ ಇಂದಿನ ___________________

18. ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಕಾರ್ಯಕ್ರಮ ಜಾರಿಗೆ ಬಂದ ವರ್ಷ __________

19. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಸ್ಥಳ ____________________

20. ಭಾರತದ ಅತಿ ಮುಖ್ಯವಾದ ಪ್ರಾಚೀನ ರಫ್ತು ________________ ಆಗಿದೆ

**III. ಹೊಂದಿಸಿ ಬರೆಯಿರಿ** 5x1=5

21. ಎ ಪಟ್ಟಿಯಲ್ಲಿರುವ ಅಂಶಗಳಿಗೆ ಬಿ ಪಟ್ಟಿಯಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಬರೆಯಿರಿ

| A | B |
|---|---|
| (A) ಡಾ|| ರಾಜೇಂದ್ರ ಪ್ರಸಾದ್ | (1) ಶಿಕ್ಷಣದ ಸಾರ್ವತ್ರೀಕರಣ |
| (B) ಜವಹರಲಾಲ್ ನೆಹರು | (2) ಪ್ರಥಮ ಕಾರ್ಮಿಕರ ಸಂಘ |
| (C) ಎನ್.ಎಂ. ಲೋತಹಂಡೆ | (3) ಕರಡು ಸಮಿತಿ ಅಧ್ಯಕ್ಷ |
| (D) ವಿಠಲ್ ರಾಮ್‌ಜೀ ಶಿಂಧೆ | (4) ಮಧ್ಯಮಾವಧಿ ಸರ್ಕಾರದ ನಾಯಕ |
| (E) ಜ್ಯೋತಿರಾವ್ ಪುಲೆ | (5) ಪುನರುಜ್ಜೀವನದ ಪಿತಾಮಹ |
| | (6) ದುರ್ಬಲ ವರ್ಗಗಳ ಸಂಘ |
| | (7) ಸಂವಿಧಾನ ರಚನೆ ಅಧ್ಯಕ್ಷ |
| | (8) ಹೋಂರೂಲ್ ಚಳವಳಿ |

**IV. ಈ ಕೆಳಗಿನ ಪ್ರಶ್ನೆಗಳಿ ಒಂದು ವಾಕ್ಯದಲ್ಲಿ ಉತ್ತರಿಸಿ.** 9x1=1

22. ___________________ ಎಂದರೇನು?

23. ಚೀನಾದಲ್ಲಿ ಸಾಂಸ್ಕೃತಿಕ ಕ್ರಾಂತಿಯ ಪರಿಣಾಮಗಳೇನು?

24. ಅಮೆರಿಕವು ಎರಡನೇ ಮಹಾಯುದ್ಧವನ್ನು ಏಕೆ ಪ್ರವೇಶಿಸಿತು?

25. ವಿಶ್ವ ಆರೋಗ್ಯ ಸಂಸ್ಥೆಯ ಮಹಾಸಾಧನೆ ಏನು?

26. ಆಗ್ನೇಯ ಏಷಿಯಾ ರಾಷ್ಟ್ರಗಳ ಒಕ್ಕೂಟದ ಗುರಿ ಏನು?

27. ಅಮೆರಿಕಕ್ಕೆ ಭಾರತದ ಅಣುಶಕ್ತಿಯ ಬಗೆಗಿನ ನಿಲುವು ಅರಿವಾಗಿದ್ದು ಹೇಗೆ?

28. ಮಾಂಗ್ರೋವ್ ಅರಣ್ಯಗಳನ್ನು ಗಂಗಾನದಿಯ ಭೂಮಿಯಲ್ಲಿ ಸುಂದರಬನ ಎಂದು ಏಕೆ ಕರೆಯುತ್ತಾರೆ?

29. ಸಾರಿಗೆ ಎಂದರೇನು?

30. ಹಸಿರುಕ್ರಾಂತಿ ಎಂದರೇನು?

**V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ**

31. ಮದ್ರಾಸ್ ಒಪ್ಪಂದದ ಷರತ್ತುಗಳೇನು?

32. ಮೊದಲ ಆಂಗ್ಲೋ-ಮರಾಠ ಯುದ್ಧದ ಫಲಿತಾಂಶಗಳೇನು?

33. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಕಂಡು ಬರುವ ಚಾರ್ಲ್ಸ್‌ವುಡ್‌ನ ಸಲಹೆಗಳೇನು?

34. ಈ ಸಾಲಿನಲ್ಲಿ ನಡೆದ ಕ್ವಿಟ್ ಇಂಡಿಯ ಚಳುವಳಿ ಇತರೆ ಪ್ರದೇಶ ಚಳುವಳಿಗಿಂತ ಹೇಗೆ ವಿಭಿನ್ನವಾಗಿದೆ?

35. ಸರದಾರ್ ಪಟೇಲರು ಹೈದರಾಬಾದಿನ ಮೇಲೆ ಪೋಲೀಸ್ ಕಾರ್ಯಾಚರಣೆಯನ್ನು ಕೈಗೊಳ್ಳಲು ಕಾರಣಗಳೇನು?

36. ರಾಷ್ಟ್ರಸಂಘದ ವಿಫಲತೆಗೆ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ

37. ಅಲಿಪ್ತ ಚಳವಳಿಯ ಉದ್ದೇಶಗಳೇನು?

38. ಲಾಭಕೋರತನಕ್ಕೆ ಅನುಸರಿಸುವ ಅನೈತಿಕ ಮಾರ್ಗಗಳೇನು?

39. ವಿಶ್ವಸಂಸ್ಥೆಯಲ್ಲಿ ಅಂತರಾಷ್ಟ್ರೀಯ ನ್ಯಾಯಾಲಯದ ಪ್ರಮುಖ ಪಾತ್ರವೇನು?

40. ಭಾರತದ ಸಂವಿಧಾನದಲ್ಲಿ ಮಾನವ ಹಕ್ಕುಗಳನ್ನು ಹೇಗೆ ರಕ್ಷಿಸಲಾಗಿದೆ?

41. ಪಶ್ಚಿಮಘಟ್ಟ ಮತ್ತು ಪೂರ್ವಘಟ್ಟಗಳಿಗಿರುವ ವ್ಯತ್ಯಾಸಗಳೇನು?

42. ಕಲ್ಲಿದ್ದಲು ಹೇಗೆ ರಚನೆಗೊಂಡಿದೆ?

43. ಸಿಮೆಂಟ್ ಬಳಕೆ ಒಂದು ದೇಶದ ಅಭಿವೃದ್ಧಿ ಗತಿಯನ್ನು ತಿಳಿಸುತ್ತದೆ ಹೇಗೆ?

44. ವಾಯು ಸಾರಿಗೆಯ ಯಾವುದಾದರೂ ಎರಡು ಅನುಕೂಲಗಳನ್ನು ತಿಳಿಸಿ

45. ಭಾರತದ ಗ್ರಾಮಾಂತರ ಪ್ರದೇಶಗಳಿಗೆ ಸಣ್ಣ ಪ್ರಮಾಣದ ಕೈಗಾರಿಕೆಗಳು ಹೇಗೆ ಉಪಯುಕ್ತವಾಗಿವೆ?

46. ಮೂರನೇ ಪಂಚಾರ್ಷಿಕ ಯೋಜನೆ ತನ್ನ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಲು ಕಾರಣಗಳೇನು?

**VI. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ. 6x3=18**

47. ಭಾರತದಲ್ಲಿ ಪೋರ್ಚ್‌ಗೀಸರ ಅವನತಿಗೆ ಕಾರಣಗಳನ್ನು ಕೊಡಿ

48. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ವಿಫಲಗೊಂಡಿತು ಏಕೆ?

49. ಐ.ಆರ್.ಡಿ.ಪಿ. ಯೋಜನೆಯ ಅಡಿಯಲ್ಲಿ ಭಾರತವು ಹೇಗೆ ಬಡತನ ನಿರ್ಮೂಲನೆ ಮಾಡಲು ಪ್ರಯತ್ನಿಸುತ್ತದೆ?

50. ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟುವುದು?

51. ಕೃಷಿ ಎಂದರೇನು? ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ವ್ಯವಸಾಯ ಪದ್ಧತಿಗಳನ್ನು ತಿಳಿಸಿ.

52. ಭಾರತವು 1947ರಿಂದಲೂ ಪ್ರತಿಕೂಲ ಪಾವತಿ ಎದುರಿಸುತ್ತಿದೆ. ಏಕೆ?

**VII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ 4x3=12**

53. 'ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ವಿವರಿಸಿ

54. ಭಾರತವು ರಷ್ಯಾದೊಂದಿಗೆ ಉತ್ತಮ ಸಂಬಂಧ ಹೊಂದಿದೆ ಎಂದು ಹೇಗೆ ಸಮರ್ಥಿಸುವಿರಿ?

55. ಭಾರತದ ವ್ಯವಸಾಯವು ಆರ್ಥಿಕ ಅಭಿವೃದ್ಧಿಯಲ್ಲಿ ಹೇಗೆ ಸಹಾಯಕವಾಗಿದೆ?

56. ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಕೆಳಗೆ ಕೊಟ್ಟಿರುವ ಸ್ಥಳಗಳನ್ನು ಗುರುತಿಸಿ.**1+3=4**

(A) ಕರ್ಕಾಟಕ ಸಂಕ್ರಾಂತಿ ವೃತ್ತ

(B) ಪಶ್ಚಿಮ ಘಟ್ಟಗಳು

(C) ಮುಂಬಾಯಿ